ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ. ಲೇಖನ-ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ವಾರ್ಷಿಕ ಚಂದಾ 5 ರೂ. ಗಳು

ಸಂಪುಟ: 4 ಸಂಚಿಕೆ: 8-9, 5, ಮೇ 1980 ಪಾಕ್ಷಿಕ ಬೆಲೆ: 20 ಪೈಸೆ

ಹಾಡು ಹಗಲಲ್ಲೇ ಮಹಿಳೆ ಮೇಲೆ ಅಮಾನುಷ ಹಿಂಸೆ

ವರದಿ : ಎಸ್. ಗಣೇಶನ್

ಇದು ಹೇಳಿ ಮಾಡಿಸಿ ತೆಗೆದ ಫೋಟೋ ಅಲ್ಲ. ಮತ್ತೆ ಗತಕಾಲದ ಘಟನೆಯೂ ಅಲ್ಲ. ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಆಂಧ್ರ ಗಡಿಯಲ್ಲಿರುವ ಜಿ. ಚರುಲೋಪಲ್ಲಿ ಎಂಬ ಗ್ರಾಮದಲ್ಲಿ ಹಾಡುಹಗಲಲ್ಲೇ ಮಹಿಳೆಯೊಬ್ಬಳನ್ನು ಇತ್ತೀಚೆಗೆ ನಡುಬೀದಿಯ ಲೈಟುಕಂಬಕ್ಕೆ ಕಟ್ಟಿ ಪೊರಕೆ ಮತ್ತು ಕಲ್ಲುಗಳಿಂದ ಹೊಡೆದು ಹಿಂಸಿಸಿದ ಅಮಾನುಷ ಘಟನೆಯಿದು.

ಈಗ ದೂರವಾಗಿರುವ ಪತಿಯ ಸ್ವಯಾರ್ಜಿತ ಜಮೀನಿನ ಒಡೆತನ ಉಳಿಸಿಕೊಳ್ಳಲು ಭೂಮಾಲೀಕನೊಬ್ಬನೊಡನೆ ಹೋರಾಟ ನಡೆಸುತ್ತಿರುವ 'ಅಪರಾಧಕ್ಕಾಗಿ' ಬೇಡರ ಜಾತಿಯ ಸಂಜೀವಮ್ಮಳಿಗೆ ಭೂಮಾಲೀಕನ ಕಡೆಯವರು ನೀಡಿದ ಶಿಕ್ಷೆಯಿದು.

ತಿಮ್ಮಂಪಲ್ಲಿಯಿಂದ ಬಸ್ಸಿಳಿದು ಎರಡು ಮೈಲಿ ಬೆಟ್ಟ-ಗುಡ್ಡಗಳ ನಡುವಿನ ಕಾಲುದಾರಿಯಲ್ಲಿ ನಡೆದು ಚರುಲೋಪಲ್ಲಿಗೆ ಕಾಲಿಟ್ಟ ಕೂಡಲೇ ನಮಗೆ ಎದುರಾಗುವುದು ಸಂಜೀವಮ್ಮಳನ್ನು ಕಟ್ಟಿ ಹಾಕಿ ಹಿಂಸಿಸಿದ ಲೈಟುಕಂಬ. ಈ ಅಮಾನುಷ ಘಟನೆಯ ಕತೆಯನ್ನು ಹೇಳಲು ಸಾಕ್ಷಿಯಾಗಿ ನಿಂತಿರುವಂತೆ ಆ ಕಂಬ ಘಟನೆಯ ನೆನಪು ಮಾಡಿಕೊಡುವುದು.

ಬಾಗೇಪಲ್ಲಿ ತಾಲ್ಲೂಕು ಪುಟ್ಟಪರ್ತಿ ಗ್ರಾಮದ 23 ವರ್ಷದ ಸಂಜೀವಮ್ಮ ಈಗ್ಗೆ ಏಳೆಂಟು ವರ್ಷಗಳ ಹಿಂದೆ ತಾನೆ ಚರುಲೋಪಲ್ಲಿಯ 50 ವರ್ಷದ (ಈಗ ಸುಮಾರು 60) ವೃದ್ಧ ಬಿತ್ತನಿ ವೆಂಕಟರಮಣಪ್ಪ ಎಂಬಾತನ ಎರಡನೇ ಪತ್ನಿಯಾದಳು. ಮೊದಲ ಪತ್ನಿ ತೀರಿಕೊಂಡಿದ್ದಾಳೆ. ಸಂಜೀವಮ್ಮಳಿಗೆ ಈಗ ಎರಡುವರೆ ವರ್ಷದ ಹೆಣ್ಣು ಮಗುವೊಂದಿದೆ. (ಚಿತ್ರದಲ್ಲಿ ಕಾಣುವ ಬಾಲಕಿ ಎತ್ತಿಕೊಂಡಿರುವುದೇ ಆ ಮಗು)

(7ನೇ ಪುಟ ನೋಡಿ)



ಸಾಯುವತನಕ ಅತ್ಯಾಚಾರ

ರಾಜಸ್ತಾನದ ಗಂಗಾನಗರ ಜಿಲ್ಲೆ ಪನ್ನಿವಾಲಾ ಎಂಬ ಹಳ್ಳಿಯಲ್ಲಿ ಇತ್ತೀಚೆಗೆ ದಲಿತ ಯುವತಿಯೊಬ್ಬಳನ್ನು ಆರುಮಂದಿ ಕಿಡಿಕೇಡಿ ಕಾಮುಕರು ಅಪಹರಿಸಿ ಮೂರುದಿನ ಸತತವಾಗಿ ಅತ್ಯಾಚಾರ ನಡೆಸಿದ್ದರಿಂದ ಆಕೆ ಸತ್ತುಹೋದಳು. ನಂತರ ಆಕೆಯ ಕಳೇಬರವನ್ನು ಊರಿನ ಬಳಿಯ ಕೆರೆಯೊಂದಕ್ಕೆ ಎಸೆಯಲಾಗಿತ್ತು.

ವಿಧಾನ ಮಂಡಲ ಅಧಿವೇಶನ ಆರಂಭವಾಗುವ ಹೊತ್ತಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜೂನ್ ಮೊದಲ ವಾರದಲ್ಲಿ ಮಾಲೂರು ತಾಲ್ಲೂಕು ಹುಣಸಿಕೋಟೆಯಿಂದ ಬೆಂಗಳೂರಿಗೆ ಸಾಂಸ್ಕೃತಿಕ ಜಾಥಾ ಮತ್ತು ಪಂಜಿನ ಮೆರವಣಿಗೆ ವ್ಯವಸ್ಥೆ ಮಾಡಿದೆ. ಶೇಷಗಿರಿಯಪ್ಪನ ಕೊಲೆ ಮಾಡಿದ ಕೃಷ್ಣೇಗೌಡನ ನಿರೀಕ್ಷಣಾ ಜಾಮೀನು ರದ್ದುಪಡಿಸಿ, ಕೂಡಲೇ ಅತನನ್ನು ಬಂಧಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ತರಲು ಮತ್ತು ಈ ಅಮಾನುಷ ಕಗ್ಗೊಲೆಯ ಪ್ರಕರಣದ ಬಗ್ಗೆ ಅರಿವು ಉಂಟುಮಾಡಲು ಸಂಘರ್ಷ ಸಮಿತಿ ಈ ಕ್ರಮಕೈಗೊಂಡಿದೆ. ಜಾಥಾದಲ್ಲಿ ಸಂಘರ್ಷ ಸಮಿತಿಯ ಎಲ್ಲ ಜಿಲ್ಲಾ ಶಾಖೆಗಳು, ಸಮುದಾಯ ಮತ್ತು ಇತರ ಅನೇಕ ಪ್ರಗತಿಪರ ಸಂಘಟನೆಗಳು ಭಾಗವಹಿಸಲಿವೆ. ಈ ಚಾರಿತ್ರಿಕ ಜಾಥಾದಲ್ಲಿ ಸಾರ್ವಜನಿಕರೆಲ್ಲ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಮೇಲಾಧಿಕಾರಿ ಕಿರುಕುಳ: ಬೀದಿಪಾಲಾದ ನೌಕರನಗೋಳು

ಮಾನ್ಯರೇ,

ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಒಂದನೇ ಸಬ್ ಡಿವಿಜನ್ನಿನಲ್ಲಿ ಆರು ರೂ.ಗಳ ದಿನ ಗೂಲಿಗೆಂದು ಮಂಡಲಿಯು ನನ್ನನ್ನು 18-6-76 ರಂದು ಕೆಲಸಕ್ಕೆ ತೆಗೆದುಕೊಂಡಿತು. ಅಸಿಸ್ಟೆಂಟ್ ಎಕ್ಸಿಕ್ಯೂಟಿ ಎಂಜಿನಿಯರ್ ನಿತ್ಯಾನಂದರು ಅನೇಕ ಬಾರಿ ಕಚೇರಿಗೆ ಬಾರದೆ ಮರುದಿನ ಹಾಜರಿ ಪುಸ್ತಕದಲ್ಲಿ ಕೆಲಸಕ್ಕೆ ಹಾಜರಾಗಿದ್ದುದುದಾಗಿ ಸಹಿ ಮಾಡುತ್ತಿದ್ದರು. ಎಕ್ಸಿಕ್ಯೂಟಿವ್ ಎಂಜಿನಿಯರ್ ಬ್ರಹ್ಮದೇವಯ್ಯ ಅವರು ಇದನ್ನು ಪತ್ತೆ ಹಚ್ಚಿ ನಿತ್ಯಾನಂದರು ಕೆಲಸಕ್ಕೆ ಬಾರದ ದಿನಗಳಲ್ಲಿ ಗೈರು ಹಾಜರಿ ಗುರುತು ಹಾಕತೊಡಗಿದರು.

ಬ್ರಹ್ಮದೇವಯ್ಯನವರ ಕ್ರಮಕ್ಕೆ ನೀನೇ ಕಾರಣನೆಂದು ನನ್ನ ಮೇಲೆ ಕುಪಿತಗೊಂಡ ನಿತ್ಯಾನಂದರು ವಿನಾಕಾರಣ ನಿನ್ನ ಕೆಲಸದ ಅವಧಿ ಮುಗಿಯಿತೆಂದು 31-5-78 ರಂದು ಕೆಲಸದಿಂದ ತೆಗೆದು ಹಾಕಿದರು.

ನನಗಿಂತಲೂ ಕಡೆಯಲ್ಲಿ ಸೇರಿದ ಅನೇಕರು ಇನ್ನು ಕೆಲಸದಲ್ಲೇ ಇರುವ ಕ್ರಮವನ್ನು ಪ್ರಸ್ತಾಪಿಸಿ ನನ್ನನ್ನು ತೆಗೆದು ಹಾಕಿದ ಬಗ್ಗೆ ಪ್ರತಿಭಟಿಸಿ ಸತ್ಯಾಗ್ರಹ ಮಾಡಿದ ನಂತರ 2-4-79 ರಂದು ಮತ್ತೆ ನನ್ನನ್ನು ಕೆಲಸಕ್ಕೆ ನೇಮಿಸಿಕೊಂಡರು. ಮೊದಲೇ ನನ್ನ ಮೇಲೆ ಸಿಟ್ಟಿದ್ದ ನಿತ್ಯಾನಂದರು ಒಂದು ಡಿವಿಜನ್ನಿನಲ್ಲಿ ಕೆಲಸಕ್ಕೆ ಹೇಳಿ ಮತ್ತೊಂದು ಡಿವಿಜನ್ನಿನಲ್ಲಿ ಕೆಲಸ ಮಾಡಿಸತೊಡಗಿದರು. ಅಧಿಕೃತವಾಗಿ ನೇಮಿಸಿದ ಡಿವಿಜನ್ನಿನಲ್ಲಿ ಕೆಲಸಕೊಡದೆ, ಕೆಲಸಕ್ಕೆ ಗೈರುಹಾಜರಾಗುತ್ತಿದೀಯೇ ಎಂದು ಸಂಬಳ ನಿಲ್ಲಿಸಿ ಮತ್ತೆ ಕೆಲಸದಿಂದ ತೆಗೆದು ಹಾಕಿರುತ್ತಾರೆ.

ಪತ್ರಗಳು

ಒಡ ಹರಿಜನನಾದ ನಾನು ಈ ಸಂಬಂಧದಲ್ಲಿ ಮೇಲಾಧಿಕಾರಿಗಳಿಗೆ ಎಷ್ಟೇ ಮನವಿ ಮಾಡಿಕೊಂಡರು ಮತ್ತೆ ಕೆಲಸ ಕೊಡದಿರುವುದರಿಂದ ಬೀದಿಪಾಲಾಗಬೇಕಾಗಿದೆ. ಈ ಬಗ್ಗೆ ಸರ್ಕಾರ ನನಗೆ ನೆರವಾಗಬಹುದೆಂದು ಆಶಿಸಲೆ?

ಬೆಂಗಳೂರು —ಎಸ್. ನಾರಾಯಣ

ದಲಿತ ನುಡಿ

ದೇಶದಲ್ಲಿನ ಅಧಿಕಾರವನ್ನು ತಮ್ಮ ಕೈಗೆ ತೆಗದುಕೊಳ್ಳುವುದಕ್ಕಾಗಿ ಬಲಹೀನ ವರ್ಗಗಳೆಲ್ಲ ಒಂದೇ ರಾಜಕೀಯ ಸಿದ್ಧಾಂತದ ವೇದಿಕೆಯ ಮೇಲೆ ನಿಂತು ಐಕ್ಯತೆಯಿಂದ ಪ್ರಬಲವಾದ ಹೋರಾಟ ನಡೆಸಬೇಕು.

—ಅಂಬೇಡ್ಕರ್

ನ್ಯಾಯಕ್ಕಾಗಿ ನಮ್ಮ ಆಗ್ರಹ, ಕಳಕಳಿ, ಮಾನವೀಯತೆಗಾಗಿ ನಮ್ಮ ಹೋರಾಟ; ಸಮಾನತೆಗಾಗಿ ನಮ್ಮ ಬಿಗಿಮುಷ್ಟಿ.

—ಬೋಯಿ ಭೀಮನ್ನ

ಪ್ರತಿಕ್ರಿಯೆ

ಬ್ಲ್ಯಾಕ್ ಪ್ಯಾಂಥರ್ಸ್: ಸಕಾಲಿಕ ಲೇಖನ

ಶ್ರೀಎಸ್. ಗಣೇಶನ್ ಅವರ ಅನುವಾದ ಲೇಖನ 'ಬ್ಲ್ಯಾಕ್ ಪ್ಯಾಂಥರ್ಸ್...' ವಿಚಾರ ಪೂರಿತವೂ, ಸಕಾಲಿಕವೂ ಆಗಿದೆ. ಅಮೆರಿಕದಲ್ಲಿನ ಕರಿಯರನ್ನು ಕೆಣಕಿ ಕಾಡುತ್ತಿರುವ ಸಮಸ್ಯೆಗಳೇ ಇಂಡಿಯಾದಲ್ಲಿ ದಲಿತರನ್ನು ಕೆಣಕಿ ಕಾಡುತ್ತಿವೆ. ಇತ್ತೀಚಿನ ಪಿಪ್ರಾದಂತಹ ನರಮೇಧಗಳು ಕರಿಯರ ಸಮಸ್ಯೆಗಿಂತಲೂ ಒಂದು ಕೈ ಮಿರಿಸುವಂತಹದು. ಇಂದಿನ ಕೊಳಕು ರಾಜಕಾರಣಿಗಳು, ಬಂಡವಾಳಶಾಹಿಗಳು, ಜಮೀನ್ದಾರರು ಈ ಕಗ್ಗೊಲೆಗಳಿಗೆ ಕಾರಣೀಭೂತರಾಗಿರುವುದು ತಿಳಿದ ವಿಷಯವೇ. ಕರಿಯರ ನ್ಯಾಯಬದ್ಧ ಬೇಡಿಕೆಗಳಾದ, ಭೂಮಿ, ಅನ್ನ, ವಸತಿ, ಶಿಕ್ಷಣ ಬಟ್ಟೆ, ನ್ಯಾಯ ಮತ್ತು ಶಾಂತಿಗಳು ದಲಿತರಿಗೂ ತುರ್ತಾದ ಅವಶ್ಯಕತೆಗಳೇ! ಈ ಸಾಮಾನ್ಯ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಇಂದಿನ ವ್ಯವಸ್ಥೆ ದಲಿತರಿಗೆ ಅಡ್ಡ ಬಂದಲ್ಲಿ ಕರಿಯರಂತೆ ನಾವೂ ಸಹ ಈ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿ ನಮ್ಮ ಸ್ವಾತಂತ್ರ್ಯವನ್ನು ಪ್ರತ್ಯೇಕವಾಗಿ ಘೋಷಿಸಿಕೊಳ್ಳಬೇಕಾದೀತು!

ಬೆಂಗಳೂರು —ಮೂರ್ತಿ

ಕರ್ನಾಟಕ ಸರ್ಕಾರವು ಡಿಸೆಂಬರ್ 13-1976ರಂದು ತನ್ನ ಎಲ್ಲ ಇಲಾಖೆಗಳಲ್ಲಿ ನೌಕರರ ಗಣತಿ ನಡೆಸಿದಾಗ ಹರಿಜನ ಮತ್ತು ಗಿರಿಜನ ನೌಕರರು ಎಷ್ಟಿದ್ದಾರೆಂದು ದೊರೆತ ಶೇಕಡಾವಾರು ಅಂಕಿ ಅಂಶಗಳಿವು. (ಎಲ್ಲ ಅಂಕಿ ಅಂಶಗಳನ್ನು ಮುಂದೆ ನಿಯಮಿತವಾಗಿ ಪ್ರಕಟಿಸಲಾಗುವುದು.)

	ಕ್ಲಾಸ್-I		%	ಕ್ಲಾಸ್-II		%	ಕ್ಲಾಸ್-III		%	ಕ್ಲಾಸ್-IV		%
	ಒಟ್ಟು	ಹ/ಗಿ		ಒಟ್ಟು	ಹ/ಗಿ		ಒಟ್ಟು	ಹ/ಗಿ		ಒಟ್ಟು	ಹ/ಗಿ	
ಕೆ. ಪಿ. ಎಸ್. ಸಿ.	6	—	—	12	—	—	105	14	13	52	6	12
ರಾಜ್‌ಭವನ್	6	—	—	4	—	—	24	3	13	88	31	35
ಸಚಿವಾಲಯ	177	1	1.00	181	6	3	1338	56	4	653	106	16
ಸಮಾಜ ಕಲ್ಯಾಣ	14	3	21	23	6	26	1797	668	37	2335	1387	59
ನ್ಯಾಯಾಂಗ	292	6	2	83	—	—	4549	665	45	2708	507	18

ಕೋಲಾರ ಜಿಲ್ಲೆ: ೩ ತಿಂಗಳಲ್ಲಿ ನಾಲ್ವರು ದಲಿತರ ಕೊಲೆ

[ಪಂಚಮ ಪ್ರತಿನಿಧಿಯಿಂದ]

ಕೋಲಾರ ಜಿಲ್ಲೆಯು ಬಿಹಾರದ ಬೆಲ್ಜಿ, ಪಿಪ್ರಾ ರೂಪ ಪಡೆಯ ತೊಡಗಿದೆ. ನಿತ್ಯವೂ ಒಂದಿಲ್ಲೊಂದು ಕಡೆ ದಲಿತರ ಹೆಣ ಬೀಳುತ್ತಿವೆ. ಜನವರಿಯಿಂದ ಮಾರ್ಚಿವರೆಗೆ 9 ಕೊಲೆಗಳು ನಡೆದಿದ್ದು ಅದರಲ್ಲಿ ಮೂರ್‍ನಾಲ್ಕು ದಲಿತರವು.

ಹುಣಸಿಕೋಟೆ ಶೇಷಗಿರಿಯಪ್ಪನ ಕೊಲೆ ನಡೆದ ಎರಡೇ ದಿನದಲ್ಲಿ (ಏಪ್ರಿಲ್ 2ರಂದು) ಕೋಲಾರ ತಾಲ್ಲೂಕು ಮಣಿಘಟ್ಟ ಎಂಬ ಗ್ರಾಮದಲ್ಲಿ ದಲಿತ ವರ್ಗದ ಮುಳುವಾಗಳಪ್ಪ ಎಂಬಾತನ ಭೀಕರ ಕೊಲೆ ನಡೆದಿದೆ. ಮಾರ್ಚ್ 18ರಂದು ಬಾಗೇಪಲ್ಲಿ ತಾಲ್ಲೂಕಿನ ಪೆನುಮಲೆ ಗ್ರಾಮದಲ್ಲಿ ಮತ್ತೊಬ್ಬ ದಲಿತ ಯುವಕ ನಂಜುಂಡ (25) ಎಂಬಾತನ ಕಗ್ಗೊಲೆಯಾಗಿದೆ.

ಮುಳುವಾಗಳಪ್ಪ ನಾರಾಯಣರೆಡ್ಡಿ ಎಂಬಾತ ಕುಖ್ಯಾತ ಭೂಮಾಲೀಕನ ಮನೆಯಲ್ಲಿ ಕೆಲವಾರು ವರ್ಷಗಳಿಂದ ಜೀತಕ್ಕಿದ್ದ. ಇತ್ತೀಚಿನ ತಿಂಗಳಲ್ಲಿ ಮುಳುವಾಗಳಪ್ಪ ಆತನ ಮನೆಯ ಜೀತಬಿಟ್ಟು ಚಂಗಾರೆಡ್ಡಿ ಎಂಬಾತನ ಬಳಿ ಜೀತ ಸೇರಿದ್ದ. ನಾರಾಯಣ ರೆಡ್ಡಿಗೆ 80 ರೂ. ಸಾಲ ಹಿಂತಿರುಗಿಸಬೇಕಿತ್ತು.

ತನ್ನ ಮನೆಯ ಜೀತಬಿಟ್ಟ ಸೇಡಿಗಾಗಿ ನಾರಾಯಣರೆಡ್ಡಿ ಸಾಲದ ಬಾಕಿ ಹೆಸರಿನಲ್ಲಿ ಮುಳುವಾಗಳಪ್ಪನಿಗೆ ಆಗಾಗ್ಗ ಚಿತ್ರಹಿಂಸೆ ಕೊಡತೊಡಗಿದ್ದ. ಕೊನೆಗೆ ಸಮಯ ನೋಡಿ ಏಪ್ರಿಲ್ 2ರಂದು ನಡುರಾತ್ರಿ ಮುಳುವಾಗಳಪ್ಪನನ್ನು ಮುಗಿಸಿಯೇ ಬಿಟ್ಟ.

ನಾರಾಯಣರೆಡ್ಡಿಯಿಂದ ಭಾರಿ ಪ್ರಮಾಣದಲ್ಲಿ ಲಂಚ ಪಡೆದಿದ್ದಾರೆನ್ನಲಾದ ವೈದ್ಯರು ಶವ ಪರೀಕ್ಷೆ ನಡೆಸಿ ಇದು 'ಆತ್ಮಹತ್ಯೆ' ಎಂದು ಸರ್ಟಿಫಿಕೆಟ್ ನೀಡಿ ದಲಿತನೊಬ್ಬನ ಕೊಲೆಯನ್ನು ಮುಚ್ಚಿಹಾಕಿದ ಘಟನೆ ಬೆಳಕಿಗೆ ಬಂದಿದೆ.

ಪೆನುಮಲೆ ಕೊಲೆ:

ಮುಳುವಾಗಳಪ್ಪನ ಕೊಲೆ ಆರ್ಥಿಕ ಕಾರಣಗಳಿಗೆ ನಡೆದರೆ ಬಾಗೇಪಲ್ಲಿ ತಾಲ್ಲೂಕಿನ ನಂಜುಂಡ ಎಂಬಾತನ ಕೊಲೆಯು ತನ್ನ ಸಹೋದರಿಯೊಡನೆ ಬೇರೊಬ್ಬ ಲೈಂಗಿಕ ಸಂಬಂಧವಿಟ್ಟುಕೊಂಡಿದ್ದಕ್ಕೆ ಅಡ್ಡಿ ಉಂಟುಮಾಡಿದ್ದಕ್ಕಾಗಿ ನಡೆದಿದೆ,

ಪೆನುಮಲೆ ಗ್ರಾಮದ ಲಕ್ಷ್ಮೀನಾಯಕ ಎಂಬಾತ ನಂಜುಂಡನ ಸಹೋದರಿ ನರಸಮ್ಮ ಎಂಬಾಕೆಯೊಡನೆ ಸಂಬಂಧ ಇಟ್ಟುಕೊಂಡಿದ್ದನೆಂದು ಹೇಳಲಾಗಿದೆ. ಇದನ್ನು ತಿಳಿದ ನಂಜುಂಡ ತನ್ನ ಸಹೋದರಿಗೆ ಬುದ್ಧಿವಾದ ಹೇಳತೊಡಗಿ ಲಕ್ಷ್ಮೀನಾಯಕನ ಸಂಬಂಧ ಕಡಿದುಹಾಕಲು ಯತ್ನಿಸಿದ. ನಂಜುಂಡನ ಈ ನಡವಳಿಕೆ ಗಮ

(ಕಡೇ ಪುಟ ನೋಡಿ)

ಸಂಘಟನೆ ಬಿಸಿ ಮುಟ್ಟಿಸಬೇಕಾದೀತು ಕಾಗೋಡ್‌ಗೆ ಎಚ್ಚರಿಕೆ

"ನಿಮಗೂ ನಮ್ಮ ಸಂಘಟನೆಯ ಬಿಸಿ ಮುಟ್ಟಿಸಬೇಕಾದೀತು." ಕಾಂಗ್ರೆಸ್ ನೆರಳು ಸೇರಿ ಇತ್ತೀಚೆಗೆ ತಾನೆ ವಿಧಾನ ಪರಿಷತ್ತಿಗೆ ಆಯ್ಕೆಯಾದ ಢೋಂಗಿ ಸಮಾಜವಾದಿ ಕಾಗೋಡು ತಿಮ್ಮಪ್ಪನವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಎಚ್ಚರಿಕೆಯಿದು,

ಸಾಗರದಲ್ಲಿ ಏಪ್ರಿಲ್ 12 ರಂದು ಮುಖ್ಯಮಂತ್ರಿ ಗುಂಡೂರಾವ್‌ಗೆ ನೀಡಿದ ಸನ್ಮಾನ ಸಮಾರಂಭದಲ್ಲಿ ದಲಿತ ಸಂಘರ್ಷ ಸಮಿತಿ ಸಾಗರ ತಾಲ್ಲೂಕು ಶಾಖೆ ಕಾರ್ಯಕರ್ತರು ಹುಣಸಿಕೋಟೆ ಶೇಷಗಿರಿಯಪ್ಪನಿಗೆ ರಕ್ಷಣೆ ಕೊಡದೆ ಆತನ ಕೊಲೆಗೆ ಕಾರಣವಾದ ಸರ್ಕಾರಕ್ಕೆ ಧಿಕ್ಕಾರ ಸೂಚಿಸಲು ಕಪ್ಪುಬಾವುಟ ತೂರಿ ಪ್ರತಿಭಟನೆ ಸೂಚಿಸಿದರು.

ಪೋಲೀಸರು ಕೂಡಲೇ ಪ್ರತಿಭಟನೆಕಾರರನ್ನು ಬಂಧಿಸಿ ವ್ಯಾನ್‌ಗೆ ಕರೆದೊಯ್ಯುತ್ತಿದ್ದಾಗ ಸನ್ಮಾನ ಸಮಾರಂಭದ ಅಧ್ಯಕ್ಷರಾಗಿದ್ದ ಕಾಗೋಡು ತಿಮ್ಮಪ್ಪ ವೇದಿಕೆ ಮೇಲಿಂದ ಸರಸರನೆ ಕೆಳಗಿಳಿದು ಬಂದು "ಇವರ್ನ ಜೈಲಿಗೆ ಕಳುಹಿಸಿ" ಎಂದು ಪೋಲೀಸರ ಎದುರೇ ಜಿಗ್ನೆ ಶಿವಾನಂದ ಮತ್ತು ಮನೋಹರ್ ಅವರನ್ನು ಹೊಡೆದರು.

ಕಾಗೋಡುರವರ ಈ ಅಮಾನುಷ ಹಲ್ಲೆಯನ್ನು ಖಂಡಿಸಿರುವ ದ. ಸಂ. ಸ. ರಾಜ್ಯಸಮಿತಿಯು ಕಾಗೋಡುರವರಿಗೆ ಬಹಿರಂಗ ಪತ್ರ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಅವರ ದಲಿತ ವಿರೋಧಿ ನಡವಳಿಕೆಯನ್ನು ಖಂಡಿಸಬೇಕೆಂದು ತನ್ನ ಎಲ್ಲ ಶಾಖೆಗಳಿಗೆ ಕರೆಕೊಟ್ಟಿದೆ.

ತರೀಕೆರೆಯಲ್ಲೊಬ್ಬನ ಕೊಲೆ

[ಪಂಚಮ ಪ್ರತಿನಿಧಿಯಿಂದ]

ತರೀಕೆರೆ ಬಾಪೂಜಿ ಕಾಲೋನಿಯ ದಲಿತವರ್ಗದ ಹನುಮಂತಪ್ಪ ಎಂಬಾತನ ಅನುಮಾನಸ್ಪದ ಕೊಲೆ ಬೆಳಕಿಗೆ ಬಂದಿದೆ.

ಉಪ್ಪಾರಜನಾಂಗದ ಗಂಗಮ್ಮ ಎಂಬಾಕೆಯನ್ನು ಮದುವೆಯಾಗಿದ್ದ ಹನುಮಂತಪ್ಪ ಏಪ್ರಿಲ್ 13 ರಂದು ಕೂಡಲೇ ಮನೆಗೆ ವಾಪಸ್‌ಬರುವುದಾಗಿ ಬಾಪೂಜಿಕಾಲೋನಿಯ ಕುಡಲ್ಲೂರು ತಿಮ್ಮಯ್ಯ ಮತ್ತು ಆತನ ಹೆಂಡತಿ ಕರಿಯಮ್ಮಳ ಜೊತೆ ಹೋದವ ಮತ್ತೆ ಬರಲಿಲ್ಲ. ಮಾರನೆದಿನ ಹನುಮಂತಪ್ಪನ ಶವ ಶಿಕ್ಷಕರ ಭವನದ ಕಕ್ಕಸ್ ರೂಮಿನಲ್ಲಿ ಕಂಡುಬಂತು. ಶವವನ್ನು ಗೋಡೆಗೆ ಒರಗಿಸಿ, ನೆಪಮಾತ್ರಕ್ಕೆ ಪಂಚೆಯನ್ನು ಸುತ್ತಲಾಗಿತ್ತು, ಎರಡು ಕಾಲಿನ ಪಾದಗಳಿಂದ ಮಂಡಿಯವರೆವಿಗೂ ಕೆಸರಿನ ಕಲೆ ಇತ್ತು. ಅಲ್ಲದೆ ಮೈಮೇಲೆಲ್ಲ ಗಾಯಗಳಿದ್ದು ಆತನ ಮರ್ಮಾಂಗದ ಜಾಗದಲ್ಲಿ ರಕ್ತಸ್ರಾವವಾಗುತ್ತಿದ್ದದ್ದು ಕಂಡುಬಂದಿದೆ.

ಕೊಲೆಯ ಈ ಎಲ್ಲ ಗುರುತುಗಳು ಕಂಡು ಬಂದಿದ್ದರು ಪೊಲೀಸರು ಈವರೆಗೆ ಯಾರನ್ನು ಬಂಧಿಸಿಲ್ಲದಿರುವುದನ್ನು ಖಂಡಿಸಿರುವ ಚಿಕ್ಕಮಗಳೂರು ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆಯು ಕೊಲೆಗಡುಕರ ಶೀಘ್ರ ಬಂಧನಕ್ಕೆ ಒತ್ತಾಯಿಸಿದೆ.

ದಲಿತರ ಈ ನಿರಂತರ ಕೊಲೆ ತಡೆಗೆ ದಲಿತರೇ ಇಂದು ತುರ್ತಾಗಿ ಸಂಘಟಿತರಾಗ ಬೇಕಾಗಿರುವ ಅಗತ್ಯವಿದೆ ಎಂದಿರುವ ದ. ಸಂ. ಸ. ಮೂರು ಮಕ್ಕಳ ವಿಧವೆ ಗಂಗಮ್ಮನಿಗೆ ಪರಿಹಾರ ಧನ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಹುಣಸಿಕೋಟೆ ಕಗ್ಗೊಲೆ :

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ಲು ಹೋಬಳಿಯ ಹುಣಸಿಕೋಟೆ ಒಂದು ಚಿಕ್ಕ ಗ್ರಾಮ. ಅಲ್ಲಿ ಶೇಷಗಿರಿಯಪ್ಪ ಎಂಬ ಬಡ ಕುಂಬಾರ ಮಡಿಕೆ-ಕುಡಿಕೆ ಮಾಡಿ ಜೀವನ ಹೊರೆಯುತ್ತಿದ್ದ. ಅದೇ ಊರಿನ ಕೃಷ್ಣೇಗೌಡ, ಮಾಲೂರು ತಾಲ್ಲೂಕಿನ, ತಾಲ್ಲೂಕು ಬೋರ್ಡ್ ಅಧ್ಯಕ್ಷ. ಆತನ ತಮ್ಮ ವೆಂಕಟೇಶಪ್ಪ ಪಂಚಾಯತಿ ಛೇರ್ಮನ್. ಕೃಷ್ಣೇಗೌಡ ದೊಡ್ಡ ಜಮೀನುದಾರ. ಶೇಷಗಿರಿಯಪ್ಪನಿಗೂ ಕೃಷ್ಣೇಗೌಡನಿಗೂ 27 ಗುಂಟೆ ಭೂಮಿ ಸಂಬಂಧವಾಗಿ ಮನಸ್ತಾಪ ಉಂಟಾಯಿತು.


ಹುಣಸಿಕೋಟೆ ಮುನಿಸ್ವಾಮಿಯ ಮಗ ಎಚ್. ಎಂ. ಕೃಷ್ಣಪ್ಪ ತನ್ನ 27 ಗುಂಟೆ ಜಮೀನನ್ನು ಮಾರಾಟ ಮಾಡಲು ಬಯಸಿದ. ಕೃಷ್ಣಪ್ಪನ ಈ ಜಮೀನನ್ನು ಕೃಷ್ಣೇಗೌಡ ತನಗೆ ಬೇಕಾದವರೊಬ್ಬರಿಗೆ ಕೊಡಿಸಬೇಕೆಂದು ಇಷ್ಟಪಟ್ಟಿದ್ದ. ಆದರೆ ಅದನ್ನು ಶೇಷಗಿರಿಯಪ್ಪ ಕೊಂಡುಕೊಂಡ. ತಾನು ಬೇರೆ ಯಾರಿಗೋ ಕೊಡಿಸಬೇಕೆಂದಿದ್ದ ಜಮೀನನ್ನು ಶೇಷಗಿರಿಯಪ್ಪ ಕೊಂಡುಕೊಂಡನಲ್ಲಾ ಎಂಬ ಆಘಾತ ಕೃಷ್ಣೇಗೌಡನಿಗೆ ಆಯಿತು. ಶೇಷಗಿರಿಯಪ್ಪನೇನು ಕೃಷ್ಣೇಗೌಡನ ಮೇಲೆ ಸೇಡು ತೀರಿಸಲು ಆ ಭೂಮಿಯನ್ನು ಕೊಳ್ಳಲಿಲ್ಲ. ಕೃಷ್ಣಪ್ಪನೇ, ಬಡವ, ನಾಲ್ಕಾರು ಮಕ್ಕಳು ಬದುಕಿಕೊಳ್ಳಲಿ ಎಂದು ಜಮೀನನ್ನು ಶೇಷಗಿರಿಯಪ್ಪನಿಗೆ ಕೊಟ್ಟಿದ್ದ. ಅಲ್ಲಿಂದ ಕೃಷ್ಣೇಗೌಡ ಶೇಷಗಿರಿಯಪ್ಪನ ಮೇಲೆ ದ್ವೇಷಕಾರ ತೊಡಗಿದ. ಶೇಷಗಿರಿಯಪ್ಪನ ಸಂಸಾರವನ್ನೇ ನಾಶಮಾಡಲು ತನ್ನ ಹಣ, ಅಧಿಕಾರವನ್ನು ಬಳಸಿದ.

ಶೇಷಗಿರಿಯಪ್ಪ ತನ್ನ ಗುಡಿಸಲ ಮುಂದೆ ಮಡಿಕೆ ಸುಡುವ ಆವುಗೆಯನ್ನು ಕಟ್ಟಿಕೊಂಡಿದ್ದ. ಕೃಷ್ಣೇಗೌಡ ಈ ಆವುಗೆ ಜನ ಸಂಚಾರಕ್ಕೆ ಅಡ್ಡಿಯಾಗಿದೆ ಎಂತಲೂ, ಊರಿನ ಸೌಂದರ್ಯಕ್ಕೆ ಮಸಿ ಬಳಿದಿದೆ ಎಂತಲೂ ಆರೋಪ ಹೊರಿಸಿ ಅದನ್ನು ಕಿತ್ತು ಹಾಕುವಂತೆ ಬಿ. ಡಿ. ಓ. ಅವರಿಂದ ನೋಟೀಸು ಕೊಡಿಸಿದ.

ಶೇಷಗಿರಿಯಪ್ಪನಿಗೆ ಒಂದೆರಡು ಎಕರೆ ಪಿತ್ರಾರ್ಜಿತ ಜಮೀನು ಇತ್ತು. ಒಂದು ಎಕರೆಯಲ್ಲಿ ಸೀಬೆ ಗಿಡಗಳನ್ನು ಬೆಳೆಸಿದ್ದ. ಮತ್ತೆ ಅರ್ಧ ಎಕರೆಯಲ್ಲಿ, ಹುರುಳಿ, ರಾಗಿ ಬೆಳೆಯುತ್ತಿದ್ದ. ಕೃಷ್ಣೇಗೌಡನಿಗೆ ಶೇಷಗಿರಿಯಪ್ಪನ ಈ ಭೂಮಿಯ ಮೇಲೆ ಕಣ್ಣು ಬಿತ್ತು. ರಾಗಿ ಬೆಳೆಯುತ್ತಿದ್ದ ಅರ್ಧ ಎಕರೆ ಭೂಮಿಯನ್ನು ನಿವೇಶನ ಇಲ್ಲದವರಿಗೆ ನಿವೇಶನ ಹಂಚಲು ಆಯ್ಕೆ ಮಾಡಲಾಗಿದೆ ಎಂದು, ಜಿಲ್ಲಾಧಿಕಾರಿಗಳನ್ನು ಹಿಡಿದು ಎಲ್. ಎ. ಓ.-ಎಚ್. ಎಲ್. ಪಿ.-13-78-79, ಜಿಲ್ಲಾ ಕಛೇರಿ ಅರ್ಜಿ ಹೋಡುವಂತೆ ಮಾಡಿದ. ಸೀಬೆ ಗಿಡಗಳನ್ನು ಬೆಳೆಯುತ್ತಿದ್ದ ಒಂದು ಎಕರೆ ಭೂಮಿಯನ್ನು 1962-63ರಲ್ಲಿ ಕೋಲಾರದ ಸಬ್ ಡಿವಿಜನ ಸಾಹೇಬರು ಮಂಜೂರು ಮಾಡಿದ್ದರು. ಆದರೆ ಕೃಷ್ಣೇಗೌಡ ಇದು ಅಕ್ರಮ ಸಾಗುವಳಿ ಎಂದು ತಹಶೀಲ್ದಾರರಿಗೆ ಹೇಳಿಕೊಟ್ಟು ಅಕ್ರಮ ಸಾಗುವಳಿಯ ತಪ್ಪಿಗಾಗಿ ಕರಾರು ತಖ್ತೆಯ ವಿಧಿಯಂತೆ. 2780 ರೂ. ಜುಲ್ಮಾನೆ ಹಾಕಿ ಅದನ್ನು ಕೂಡಲೇ ಸಲ್ಲಿಸುವಂತೆ ನೋಟೀಸು ಜಾರಿ ಮಾಡಲಾಯಿತು. ಇಷ್ಟೆಲ್ಲ ನೋಟೀಸು ಸ್ವೀಕರಿಸಿದ ಶೇಷಗಿರಿಯಪ್ಪ ತನ್ನಲ್ಲಿದ್ದ ದಾಖಲೆಗಳ ಮೂಲಕ ತಾನು ತಪ್ಪು ಮಾಡಿಲ್ಲವೆಂದು ಕೃಷ್ಣೇಗೌಡ ಮುಂತಾದವರು ವಿನಾ ಕಾರಣ ತೊಂದರೆ ಕೊಡುತ್ತಿದ್ದಾರೆಂದು ಮೇಲಧಿಕಾರಿಗಳಿಗೆ ಅ… ಬರೆದುಕೊಂಡ ಕೃಷ್ಣೇಗೌಡ ಮಾಡಿದ್ದು ವಿ… ನಡೆಯದಾಯಿತು.

ಇದರಿಂದ ಕೃಷ್ಣೇಗೌಡನಿಗೆ ವಿಪರೀ… ಕೋಪ ಬಂತು ಸರ್ಕಾರದ ಕಾನೂನ… ತನ್ನ ಕೈಗೆ ತೆಗೆದುಕೊಂಡು, ಅವನ ಬಂಟ… ಶೇಷಗಿರಿಯಪ್ಪನ ಗುಡಿಸಲು ಅಕ್ರಮವಾ… ಕಟ್ಟಲಾಗಿದೆ ಎಂದು ಅದನ್ನು ಕಿತ್ತು ಹಾ… ದರು. ಮಡಿಕೆ ಒಡೆದರು. ಅವುಗಳನ್ನು ನ… ಸಮ ಮಾಡಿದರು ರಾಗಿ ಬೆಳೆಯನ್ನು ಕೊಯ… ಮನೆಗೆ ಸಾಗಿಸಿದರು. ನಿವೇಶನ ಮಾಡ… ಜಮೀನಿನಲ್ಲಿ ದಾರ ಹಿಡಿದರು. ಸೀಬೆ ಗಿಡ… ಳನ್ನು ಕಡಿದು ವನಮಹೋತ್ಸವ ಮಾಡಿದರ… ದೊಣ್ಣೆ ಮಚ್ಚು ಹಾರೆಗಳನ್ನು ಹಿಡಿದು ಶೇ… ಗಿರಿಯಪ್ಪನನ್ನು ಕೊಚ್ಚಿ ಹಾಕುತ್ತೇವೆಂದು ಕೂಗ… ಡಿದರು.

ಇಂಥ ಕಷ್ಟ ಹಿಂಸೆಗಳನ್ನು ಸಹಿಸಿಕೊಂ… ಶೇಷಗಿರಿಯಪ್ಪ ತನ್ನ ಆಸ್ತಿ ಮತ್ತು ಜೀ…



ಸಿಟ್ಟಿಗೆದ್ದ ಪ್ರದರ್ಶನಕಾರರು ಬೆಂಗಳೂರಿನಲ್ಲಿ ವಿಧಾನಸಭೆಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ದಿನೇ ದಿನೇ ಹೆಚ್ಚುತ್ತಿರುವ ದಲಿತರ ಕೊಲೆ ಸುಲಿಗೆ, ದೌರ್ಜನ್ಯ ಮತ್ತು ಮಹಿಳೆಯರ ಮೇಲಿನ ಅಮಾನುಷ ಅತ್ಯಾಚಾರ ಖಂಡಿಸಲು ಡಾ. ಬಿ. ಆರ್. ಅಂಬೇಡ್ಕರ್ ಅವರ 89ನೇ ಜನ್ಮದಿನವನ್ನು ಏಪ್ರಿಲ್ 14ರಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಎಲ್ಲ ಶಾಖೆಗಳು ರಾಜ್ಯದಾದ್ಯಂತ 'ದೌರ್ಜನ್ಯ ವಿರೋಧಿ ದಿನ'ವನ್ನಾಗಿ ಆಚರಿಸಿದವು.

ಹುಣಸಿಕೋಟೆ ಶೇಷಗಿರಿಯಪ್ಪನ ಕೊಲೆ ಘಟನೆಯನ್ನು ಪ್ರಮುಖವಾಗಿಟ್ಟುಕೊಂಡು ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ, ಪ್ರದರ್ಶನದಲ್ಲಿ ದಲಿ… ಸಂಘರ್ಷ ಸಮಿತಿ ಜೊತೆಗೂಡಿ ಬಂಡಾಯ… ಸಾಹಿತ್ಯ ಸಂಘಟನಾ ಸಮಿತಿ, ಸಿ.ಪಿ.ಐ(ಎಂ) ಸಿ.ಪಿ.ಐ, ಬೆಂಗಳೂರು ಜಿಲ್ಲಾ ರೈತ ಸಂಘ… ಸಮುದಾಯ, ದುಡಿಯುವ ಮಹಿಳೆಯ… ಹೋರಾಟ ಸಮಿತಿ, ಮಹಿಳಾ ವಿಮೋಚನ… ಸಮಿತಿ ಮುಂತಾದ ಪ್ರಗತಿಪರ ಎಡ ಸಂಘಟ… ಗಳು ಪಾಲ್ಗೊಂಡಿದ್ದವು.

ದ.ಸಂ.ಸ. ವ್ಯವಸ್ಥೆಗೊಳಿಸಿದ್ದ ದೌರ್ಜನ… ವಿರೋಧಿ ಸಮನ್ವಯ ಸಮಿತಿ ಆಶ್ರಯದ…

...ರಂತರ ಹೋರಾಟದ ಒಂದು ಹಿನ್ನೋಟ

...ಣೆ ಮಾಡಬೇಕೆಂದು ಕೋಲಾರ ಜಿಲ್ಲಾ,
...ೀಲಿಸ್ ಸೂಪರಿಂಟೆಂಡೆಂಟರಿಗೆ 1979 ಫೆಬ್ರ
...1, ಮಾರ್ಚಿ 30, ಮೇ 13, ಜೂನ್
...ಗಳು 13, 15, 19 ಮತ್ತು 30 ಜುಲೈ,
...ಸ್ಟ್ 2, 16, ಸೆಪ್ಟೆಂಬರ್ 10ನೇ
...ೀಖುಗಳಲ್ಲಿ ಖುದ್ದಾಗಿ ಅರ್ಜಿ ಸಲ್ಲಿಸಿದ.
... ಪಿ ಯುವಂಗೆ ಫೆಬ್ರವರಿ 1 ರಿಂದ ಡಿಸೆಂ
... 4 ಅವಧಿಯಲ್ಲಿ 17 ಅರ್ಜಿಗಳನ್ನು
...ಸಿರುವುದಕ್ಕೆ ದಾಖಲೆಗಳಿವೆ. ಇಷ್ಟೆ ಅಲ್ಲ
...5-1979ರಂದು ಆಗಿನ ಮುಖ್ಯಮಂತ್ರಿ
...ವರಾಜ ಅರಸರಿಗೆ ಅರ್ಜಿ ಬರೆದು ತನ್ನ
...ವ ಭೀತಿಯನ್ನು ಹೇಳಿಕೊಂಡ. ಅರ್ಜಿಯ
...ಗಳನ್ನು ವಿರೋಧ ಪಕ್ಷದ ನಾಯಕ ಶ್ರೀ
...ವಣ್ಣಯಿ., ರಾಜ್ಯ ಸರ್ಕಾರದ ಮುಖ್ಯ
...ರ್ಯದರ್ಶಿ, ಗೃಹ ಇಲಾಖೆಯ ಕಮೀಷನರ್,
...ಚಾಯಿತಿ ರಾಜ್ಯ ಇಲಾಖೆ ಮಂತ್ರಿ, ಗೃಹ
...ಂತ್ರಿ ಐ. ಜಿ. ಪಿ, ಡಿ. ಐ. ಜಿ., ಅವರಿಗೆ
...ಸಲಾಗಿದೆ. ಈ ಅರ್ಜಿಗಳು ಅವರ ಆಫೀ

ಸಿಗೆ ತಲುಪಿದ್ದಕ್ಕೆ ದಾಖಲೆಗಳಿವೆ. 27-7-79 ರಂದು ಕ್ಷೇತ್ರದ ಶಾಸಕ ಪಿ ಎಮ್. ರೆಡ್ಡಿಯವರಿಗೆ ಅರ್ಜಿ ನೀಡಿ, ಕೃಷ್ಣೇಗೌಡ ಮತ್ತು ಸಹೋದರರಿಂದ ತನ್ನ ಪ್ರಾಣ ಉಳಿಸಿ ಎಂದು ಬೇಡಿಕೊಂಡ. ಅಂದು ಶಾಸಕಿಯಾಗಿದ್ದ ಇಂದು ರಾಜ್ಯ ಸಚಿವೆಯಾಗಿರುವ ಶ್ರೀಮತಿ ರೇಣುಕಾ ರಾಜೇಂದ್ರನ್ ಅವರ ಮೂಲಕ ಜಿಲ್ಲಾ ಎಸ್. ಪಿ. ಸಾಹೇಬರಿಗೆ ಪ್ರಭಾವ ಬೀರಿಸುವ ಪ್ರಯತ್ನ ಮಾಡಿದ್ದ ಪುರಾವೆಗಳಿವೆ.

1979 ಅಗಸ್ಟ್ 6ನೆಯ ದಿನ ಕರಾಳ ದಿನ. ಅಂದು ಕೃಷ್ಣೇಗೌಡನ ತಮ್ಮ ವೆಂಕಟೇಶಪ್ಪ, ನಂಜುಂಡ ಮುಂತಾದ 15-20 ಜನ ಗುಂಡಾಗಳು ಸೀಬೆ ತೋಪು ಕಾಯುತ್ತಿದ್ದ ಶೇಷಗಿರಿಯಪ್ಪನ 19 ವರ್ಷದ ವಿಧವೆ ಮಗಳು ಅನುಸೂಯಮ್ಮನ ಮೇಲೆ ಅತ್ಯಾಚಾರ ಮಾಡಿದರು, ಪ್ರಜ್ಞೆ ತಪ್ಪಿ ಬಿದ್ದಿದ್ದ ಅವಳ ಬಾಯಲ್ಲಿ ಉಚ್ಚೆ ಹೊಯ್ದರು.

ಶೇಷಗಿರಿಯಪ್ಪನಿಗೆ ಸರ್ಕಾರಿ ಅಧಿಕಾರಿಗಳಿಂದಲೇ ಆಗಲಿ, ಮಂತ್ರಿ ಶಾಸಕರಿಂದಲೇ ಆಗಲಿ ಪೋಲೀಸರಿಂದಲೇ ಆಗಲೀ, ನೆರವು ದೊರೆಯಲಿಲ್ಲಾ, ಕೊನೆಯಾಗಳಿಗೆಯಲ್ಲಿ ಟೇಕಲ್ಲು ಪೋಲೀಸು ದೇಫೇದಾರರಿಗೆ ಅರ್ಜಿ ಸಲ್ಲಿಸಿ "ನನ್ನ ಖೂನಿ ಆಗುವುದನ್ನು ತಪ್ಪಿಸಿ" ಎಂದು ಅಂಗಲಾಚಿದ್ದ. ಇಷ್ಟೆಲ್ಲಾ ನಡೆದ ತರುವಾಯ 1979 ನವೆಂಬರಿನಲ್ಲಿ ದಲಿತ ಸಂಘರ್ಷ ಸಮಿತಿಯವರು ಮಾಲೂರು ತಾಲ್ಲೂಕಿನಲ್ಲಿ ಜಾತಾ ಹೋಗುತ್ತಿದ್ದಾಗ, ಶೇಷಗಿರಿಯಪ್ಪ ಅವರ ಮುಂದೆ ತನ್ನ ಗೋಳನ್ನು ತೋಡಿಕೊಂಡ. ಶೇಷಗಿರಿಯಪ್ಪನ ಮೇಲೆ ನಡೆಯುತ್ತಿರುವ ಕ್ರೂರ ದಬ್ಬಾಳಿಕೆಯನ್ನು ಅನುಸೂಯಮ್ಮನ ಮೇಲೆ ನಡೆದ ಅತ್ಯಾಚಾರವನ್ನು ಕೇಳಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕೋಲಾರ ಶಾಖೆಯು ಅನ್ಯಾಯವನ್ನು ಪ್ರತಿಭಟಿಸಿ 29-11-1979ರಂದು ಮಾಲೂ

(6ನೇ ಪುಟ ನೋಡಿ)

...ಟ್ಟಿಗೆದ್ದ ಪ್ರದರ್ಶನಕಾರರಿಂದ ವಿಧಾನಸಭೆಗೆ ಲಗ್ಗೆ

...ದ ಮೆರವಣಿಗೆಯಲ್ಲಿ 'ಕೃಷ್ಣೇಗೌಡ ಕೇಡಿ
... ಅವನಿಗೆ ಬೇಡಿ' ಕೃಷ್ಣೇಗೌಡನ ನಿರೀಕ್ಷಣಾ
...ೀನುರದ್ದಾಗಲಿ'. ದಲಿತರಿಗೆ ರಕ್ಷಣೆಕೊಡಿ
...ವೆ ರಾಜ್ಯ ಕೊಡಿ" ಎಂಬ ಘೋಷಣೆಗಳೊಂ
...ಮೈಸೂರು ಬ್ಯಾಂಕ್ ಚೌಕದಿಂದ ಸಹಸ್ರಾರು
...ರ್ಶನಕಾರರು ತಮ್ಮ ಸಿಟ್ಟು-ಆಕ್ರೋಶವನ್ನು
...ಪಡಿಸಲು ಪ್ರದರ್ಶನಕ್ಕೆ ನಿಷೇಧಿತ ಪ್ರದೇಶ
... ಉಲ್ಲಂಘಿಸಿ ವಿಧಾನಸೌಧವನ್ನು ಮುತ್ತಿಗೆ
...ದ ಅಪೂರ್ವ ಪ್ರಸಂಗ ನಡೆಯಿತು.

...ದ ಚಿಕ್ಕಲಾಲ್‌ಬಾಗಿನಲ್ಲಿ ದಲಿತ ಕಲಾ ಮಂಡ
... ಕ್ರಾಂತಿಕಾರಿ ಹಾಡುಗಳೊಡನೆ ಭಾರಿ ಬಹಿ
... ಸಭೆ ಆರಂಭವಾಯಿತು.

...ತರ ಮೇಲಿನ ನಿರಂತರ ದೌರ್ಜನ್ಯ ಖಂಡಿಸಿ
... ಐ.ನ ಎಂ. ಎಸ್. ಕೃಷ್ಣನ್, ಸಿ.ಪಿ.ಎಂ.ನ
...ಕೆ. ಭಟ್, ಬಂಡಾಯ ಸಾಹಿತ್ಯ ಸಂಘಟ
... ಕಾಳೇಗೌಡ ನಾಗವಾರ ಮತ್ತು ರಮೇಶ
... ಗದ್ದೆ ಮಾತನಾಡಿದರು, ಧಾರವಾಡ

ದ. ಸಂ. ಸ. ಸಂಚಾಲಕ ವಿಜಯಪಾಟೀಲರು 'ಹೋರಾಟದ ಹಾಡುಗಳು.' ಕೃತಿಯನ್ನು ಬಿಡುಗಡೆ ಮಾಡಿದರು. ಆರಂಭದಲ್ಲಿ ದ. ಸಂ. ಸ. ಕಾರ್ಯಕರ್ತ ಕೆ. ರಾಮಯ್ಯ ಸ್ವಾಗತಿಸಿದರು. ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ರಾಜ್ಯ ಸಂಚಾಲಕ ಬರಗೂರು ರಾಮಚಂದ್ರಪ್ಪ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕೋಲಾರ

ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಮಾನವತಾ ವೇದಿಕೆ, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಮುಂತಾದ ಪ್ರಗತಿಪರ ಸಂಘಟನೆಗಳು ದೌರ್ಜನ್ಯ ವಿರೋಧಿ ದಿನವನ್ನು ಆಚರಿಸಿದವು. ವಿಜಯ ಪಾಟೀಲ, ಲಕ್ಷ್ಮೀಪತಿ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು

ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಬೀದಿ ಭಾಷಣಗಳ ಮೂಲಕ ದಲಿತರ ಮೇಲಿನ ದೌರ್ಜನ್ಯಗಳನ್ನು ಖಂಡಿಸಿ 'ದೌರ್ಜನ್ಯ ವಿರೋಧಿ ದಿನ' ಆಚರಿಸಲಾಯಿತು. ರಾಜೇಂದ್ರ ನಗರದಲ್ಲಿ ನಡೆದ ಸಭೆಯೊಂದರಲ್ಲಿ ದ. ಸಂ. ಸ ಕಾರ್ಯಕರ್ತರಾದ ದೇವನೂರ ಮಹಾದೇವ ಮತ್ತು ಹರಿಹರಾನಂದ ಸ್ವಾಮಿ ಅವರು ಮಾತನಾಡಿ ದಲಿತ ಸಂಘಟನೆಯ ಅಗತ್ಯತೆಗಳನ್ನು ವಿವರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ದಲಿತ ವಿದ್ಯಾರ್ಥಿ ಒಕ್ಕೂಟದ ಆಶ್ರಯದಲ್ಲಿ ಸಮಾಜ ಶಾಸ್ತ್ರ ಅಧ್ಯಾಪಕಿ ಸುಮಿತ್ರಾ ಬಾಯಿ ಅವರ ಅಧ್ಯಕ್ಷತೆಯಲ್ಲಿ ಡಾ॥ ಅಂಬೇಡ್ಕರ್ ಜನ್ಮದಿನವನ್ನು ಆಚರಿಸಲಾಯಿತು. ಬಿ ಜೆ ನಾಗರಾಜ್, ಜಿ. ಎಚ್. ನಾಯಕ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಭದ್ರಾವತಿ

ಕಮಲಾ ನೆಹರು ಕಾಲೇಜಿನ ಅಧ್ಯಾಪಕ ವಿ ಎಮ್. ಲಕ್ಷ್ಮೀ ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ

(6ನೇ ಪುಟ ನೋಡಿ)

ಹುಣಸಿಕೋಟೆ ಕಗ್ಗೊಲೆ...

(ಮಧ್ಯದ ಪುಟದಿಂದ)

ರಿನಲ್ಲಿ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿತು. ಕೃಷ್ಣೇಗೌಡನ ಪ್ರತಿಕೃತಿ ದಹನ ಮಾಡಲಾಯಿತು. ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ತಾ. 10-12-1979ರಂದು ದಲಿತ ಸಂಘರ್ಷ ಸಮಿತಿ ಮಹಿಳಾ ವಿಭಾಗವು ಬರೀ ಸ್ತ್ರೀಯರ ಬೃಹತ್ ಮೆರವಣಿಗೆ ತೆಗೆದು ಕೃಷ್ಣೇಗೌಡ ಮುಂತಾದವರ ಅತ್ಯಾಚಾರವನ್ನು ಖಂಡಿಸಿತು. ಈ ಬಗ್ಗೆ ಕರ್ನಾಟಕ ವಿವಿಧ ಭಾಗದ ದಲಿತ ಸಂಘರ್ಷ ಸಮಿತಿಗಳು ಮೆರವಣಿಗೆ, ಖಂಡನಾ ಸಭೆಗಳನ್ನು ಮಾಡಿದವು. ಆದರೂ ಅಧಿಕಾರಿಗಳು ವಿಚಾರಗೊಳ್ಳಲಿಲ್ಲ. ತಾ. 5-12-1979ರಂದು ದಲಿತ ಸಂಘರ್ಷ ಸಮಿತಿಯವರು, ಅನಸೂಯಮ್ಮನ ಪ್ರಕರಣ ಕುರಿತು ಎಲ್ಲಾ ಪೋಲೀಸು ಆಫೀಸಿನ ಮುಂದೆ ಧರಣಿ ಕೂತರು. ಎಸ್. ಪಿ. ಸಾಹೇಬರು ಸತ್ಯಾಗ್ರಹಿಗಳನ್ನು ಬಂಧಿಸಿ, ಅವರ ಮೇಲೆ ಮೊಕದ್ದಮೆ ಹೂಡಿದರೇ ಹೊರತು ಅಪರಾಧಿಗಳನ್ನು ಬಂಧಿಸಲಿಲ್ಲ. ಅದೇ ದಿನ ದಲಿತ ಸಂಘರ್ಷ ಸಮಿತಿಯವರು ಬೆಂಗಳೂರಿನಲ್ಲಿ ವಿಶೇಷ ಪತ್ರಿಕಾ ಸಂದರ್ಶನ ಏರ್ಪಡಿಸಿ ದೌರ್ಜನ್ಯವನ್ನು ಖಂಡಿಸಿದರು.

ಇಷ್ಟಾದರೂ ಸರ್ಕಾರದ ಯಂತ್ರ ನಿಷ್ಕ್ರಿಯವಾಗಿತ್ತು. ಅಧಿಕಾರಿಗಳು ಕೃಷ್ಣೇಗೌಡನ ಪರವಾಗಿದ್ದರು. ಪೋಲೀಸರು ಗೊರಕೆ ಹೊಡೆಯುತ್ತಿದ್ದರು. ಇದರಿಂದ ತಾವು ಏನು ಮಾಡಿದರೂ ನಡೆಯುತ್ತದೆ ಎಂದು ಹುರುಪುಗೊಂಡ ಕೃಷ್ಣೇಗೌಡ ಮತ್ತು ಅವನ ದುಷ್ಟಕೂಟ ತಾರೀಖು 30-3-1980ರಂದು ಶೇಷಗಿರಿಯಪ್ಪನ ಮನೆಗೆ ನುಗ್ಗಿ ಅವನನ್ನು ಕೊಲೆ ಮಾಡಿದರು. ಮನೆ ಮಂದಿಗೆಲ್ಲ ಭೀಕರ ಗಾಯಗಳಾಗಿ ಆಸ್ಪತ್ರೆ ಸೇರಿದರು. ಕೊನೆಗೂ ನಿರೀಕ್ಷಿತ ಕೊಲೆಯನ್ನು ಯಾರೂ ತಡೆಯಲಿಲ್ಲ. ಈಗ ಮುಖ್ಯ ಕೊಲೆ ಆರೋಪಿ ಕೃಷ್ಣೇಗೌಡನಿಗೆ ನಿರೀಕ್ಷಣಾ ಜಾಮೀನು ನೀಡಿರುವುದು ಖಂಡನಾರ್ಹ.

ನಮ್ಮ ಬೇಡಿಕೆಗಳು:-

1. ದಲಿತರ ಕೊಲೆ ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ನೀಡದಂತೆ ಕಾನೂನು ತಿದ್ದುಪಡಿಯಾಗಬೇಕು.

2. ಸರ್ಕಾರ ಆರೋಪಿ ಕೃಷ್ಣೇಗೌಡನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

3. ಏಪ್ರಿಲ್ 14 ರಂದು ರಾಜ್ಯಾದ್ಯಂತ ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳು ಹು ಣ ಸಿ ಕೋ ಟೆ ಕೊಲೆಯನ್ನು ಖಂಡಿಸಲು ನಡೆಸಿದ ಪ್ರದರ್ಶನ ಮತ್ತಿತರ ಪ್ರತಿಭಟನೆಗೆ ಮನ್ನಣೆ ಕೊಟ್ಟು ಕೊಲೆ ಆರೋಪಿ ಕೃಷ್ಣೇಗೌಡನನ್ನು ಸಧ್ಯಕ್ಕಾದರೂ ರಾಜ್ಯದಿಂದ ಗಡೀಪಾರು ಮಾಡಲು ಸರ್ಕಾರ ಕೂಡಲೇ ತೀರ್ಮಾನ ತೆಗೆದುಕೊಳ್ಳಬೇಕು.

—ಕರ್ನಾಟಕ ದಲಿತ ಸಂಘರ್ಷ ಸಮಿತಿ

ನ್ಯಾಯ ಕೇಳಲು ಹೋದ ತಾತಗುಣಿ ಕಾರ್ಮಿಕರು ಜೈಲಿಗೆ

ಮುಖ್ಯಮಂತ್ರಿ ಗುಂಡೂರಾವ್ ಬಳಿ ನ್ಯಾಯ ಕೇಳಲು ಹೋಗುತ್ತಿದ್ದ 'ಮಹಾ ಅಪರಾಧ ಕ್ಕಾಗಿ' ತಾತಗುಣಿ ದಲಿತ ಕಾರ್ಮಿಕರಿಗೆ ಇತ್ತೀಚೆಗೆ ಆದದ್ದು ಜೈಲು ಶಿಕ್ಷೆ. ನ್ಯಾಯಬದ್ಧ ಕೂಲಿ ನೀಡಬೇಕೆಂದು ಒತ್ತಾಯಿಸಿ ಕಳೆದ ವರ್ಷದಿಂದಲೂ ಸತತ ಹೋರಾಟ ಮಾಡುತ್ತಿರುವ ಕಾರ್ಮಿಕರು ತಮ್ಮ ಕೂಗನ್ನು ವಿಧಾನ ಸೌಧಕ್ಕೆ ಮುಟ್ಟಿಸಲು ಕಳೆದ ಡಿಸೆಂಬರ್ 5ರಂದು ತಾತಗುಣಿಯಿಂದ ಬೆಂಗಳೂರು ಚಲೋ ಮಾಡಿ ಅನಿರ್ದಿಷ್ಟಕಾಲದ ಮುಷ್ಕರ ನಡೆಸುತ್ತಿದ್ದಾರೆ.

ಮುಷ್ಕರ ಐದು ತಿಂಗಳು ದಾಟಿದರು ತಮ್ಮ ಸಮಸ್ಯೆಗಳಿಗೆ ಕಿವಿಗೊಡದ ಸರ್ಕಾರದ ಅಮಾನವೀಯ ವರ್ತನೆಯನ್ನು ಪ್ರತಿಭಟಿಸಿ ಕಾರ್ಮಿಕರು ಏಪ್ರಿಲ್ 22ರಂದು ಮುಖ್ಯಮಂತ್ರಿಮನೆ ಮುಂದೆ ಧರಣಿ ಕೂರಲು ಮೆರವಣಿಗೆ ಹೋಗುತ್ತಿದ್ದಾಗ ಪೋಲೀಸರು ಅವರನ್ನು ಬಂಧಿಸಿ ಜೈಲಿಗೆ ತಳ್ಳಿದರು.

ಬೆಂಗಳೂರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಪಿ. ಜಗನ್ನಾಥ್ ನೇತೃತ್ವದಲ್ಲಿ ಹೆಂಗಸು ಮಕ್ಕಳಾದಿಯಾಗಿ ಸುಮಾರು 50 ಮಂದಿ ಕಾರ್ಮಿಕರು ನ್ಯಾಯ ಕೇಳಿದ ತಪ್ಪಿಗಾಗಿ ಜೈಲು ಸೇರಿದರು.

ಸರ್ಕಾರದ ಈ ಕ್ರೂರವರ್ತನೆಯನ್ನು ಪ್ರತಿಭಟಿಸಿ ಜಗನ್ನಾಥ್ ಜೈಲಿನಲ್ಲಿ 27ರವರೆಗೆ ಉಪವಾಸ ಸತ್ಯಾಗ್ರಹ ನಡೆಸಿದರು. ಮಾರುದಿನ ಎಲ್ಲರನ್ನು ಬಿಡುಗಡೆ ಮಾಡಲಾಯಿತು. ಕಾರ್ಮಿಕರ ಹೋರಾಟವನ್ನು ಹತ್ತಿಕ್ಕುವ ಸರ್ಕಾರದ ಯತ್ನವನ್ನು ಅನೇಕ ಸಂಘಟನೆಗಳು ಖಂಡಿಸಿವೆ.

ಇನ್ನೂ ಪರಿಹಾರ ಕಾಣದ ಈ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಬೇಕಾಗಿರುವ ತುರ್ತು ಅನಿವಾರ್ಯತೆ ಈಗ ಎಲ್ಲ ಪ್ರಗತಿಪರ ಸಂಘಟನೆಗಳ ಮುಂದಿದೆ.

ಪ್ರದರ್ಶನಕಾರರಿಂದ ವಿಧಾನಸೌಧಕ್ಕೆ ಲಗ್ಗೆ

(ಮಧ್ಯದ ಪುಟದಿಂದ)

ಅಂಬೇಡ್ಕರ್‌ರವರ ಜನ್ಮದಿನದ ಸಭೆಯನ್ನುದ್ದೇಶಿಸಿ ಪರಮಶಿವ ನಡುಬೆಟ್ಟ ಮತ್ತು ಮಹಮದ್ ಸೀರಾಜುದ್ದೀನ್ ಮಾತನಾಡಿದರು. ಎಂ. ಚಂದ್ರಶೇಖರಯ್ಯ "ಹೋರಾಟದ ಹಾಡುಗಳು" ಬಿಡುಗಡೆ ಮಾಡಿದರು.

ಮಂಗಳೂರು

ದಲಿತರ ಮೇಲಿನ ದೌರ್ಜನ್ಯಗಳನ್ನು ಖಂಡಿಸುವ ಮೂಲಕ ಪ್ರಾಧ್ಯಾಪಕ ಬಸವರಾಜು ಅವರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಅವರ 89ನೇ ಜನ್ಮದಿನ ಆಚರಿಸಲಾಯಿತು. ಬೆಂಗಳೂರಿನ ದ.ಸಂ.ಸ. ಕಾರ್ಯಕರ್ತ ಸಿದ್ದಲಿಂಗಯ್ಯನವರು ಮಾತನಾಡಿ "ದಲಿತರ ಮೇಲಿನ ದೌರ್ಜನ್ಯ ತಡೆಯಲು ಸರ್ಕಾರಗಳು ವಿಫಲಗೊಂಡಿರುವುದರಿಂದ ದಲಿತರು ಸಂಘಟಿತರಾಗಿ ಅಂಬೇಡ್ಕರ್ ಅವರ ಹೋರಾಟ ಮುಂದುವರಿಸುವ ಜವಾಬ್ದಾರಿಯನ್ನು" ಒತ್ತಿ ಹೇಳಿದರು. ಜಿಲ್ಲಾ ದ.ಸಂ.ಸ. ಸಂಚಾಲಕ ಬಿ. ರಾಮಕೃಷ್ಣ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ವಿವಿಧ ಪ್ರಗತಿಪರ ಸಂಘಟನೆಗಳು ದಲಿತ ಸಂಘರ್ಷ ಸಮಿತಿಯ ಜತೆಗೂಡಿ ಚಿಕ್ಕಮಗಳೂರು, ರಾಯಚೂರು, ಕಲ್ಬುರ್ಗಿ, ತುಮಕೂರು ಇನ್ನೂ ಮುಂತಾದ ಕಡೆಗಳಲ್ಲಿ ಡಾ. ಅಂಬೇಡ್ಕರ್ ಅವರ ಜನ್ಮದಿನವನ್ನು 'ದೌರ್ಜನ್ಯ ವಿರೋಧಿ ದಿನವನ್ನಾಗಿ ಆಚರಿಸಿದ ವರದಿಗಳು ಬಂದಿವೆ.

ಎಲ್ಲಡೆಯು ಪ್ರತಿಭಟನೆ ಪ್ರದರ್ಶನಗಳು ನಡೆಯುವುದರ ಜತೆಗೆ ದಲಿತರ ಮೇಲಿನ ದೌರ್ಜನ್ಯ ಖಂಡಿಸುವ ಗೋಡೆ ಬರಹಗಳು ಮತ್ತು ಬಿತ್ತಿಪತ್ರಗಳನ್ನು ಅಂಟಿಸಲಾಗಿದೆ.

ಹಾಡುಹಗಲಲ್ಲೇ ಮಹಿಳೆ ಮೇಲೆ ಅಮಾನುಷ ಹಿಂಸೆ

(ಒಂದನೇ ಪುಟದಿಂದ)

ಜಮೀನು ವಿಷಯದಲ್ಲಿ ಪತಿ–ಪತ್ನಿಯರ ನಡುವೆ ಈಚಿನ ಎರಡು ವರ್ಷಗಳಲ್ಲಿ ನಿತ್ಯವೂ ಜಗಳ. "ಇಷ್ಟು ಬಂದಂಗೆಲ್ಲ ಸಾಲಮಾಡಿ ಜಮೀನು ಮಾರ್ಕೊಂಡ್ರೆ, ನಾವೆಂಗೆ ಬದುಕೋದು" ಎಂದು ಸಂಜೀವಮ್ಮ ಪತಿಗೆ ಬುದ್ಧಿವಾದ ಹೇಳಲಾರಂಭಿಸಿದಳು.

ಚರುಲೋಪಲ್ಲಿ ಬಳಿಯೇ ಇರುವ ಮುಲಾಂಗಿ ಚಟ್ಲಪಲ್ಲಿಯಲ್ಲಿ ನಾರಾಯಣರಾವ್ ಎಂಬಾತ ಭಾರಿ ಕುಳ. ದೊಡ್ಡ ಜಮೀನುದಾರ. ಜತೆಗೆ ಪಿ. ಡಬ್ಲ್ಯೂ. ಡಿ. ಯಲ್ಲಿ ಮೇಸ್ತ್ರಿ. ಬಡವರ ಜಮೀನು ಕಬಳಿಸುವುದರಲ್ಲಿ ನಿಸ್ಸೀಮ ಎಂದು ಅಲ್ಲೆಲ್ಲ ಹೆಸರುವಾಸಿ. ಈತನ ಪ್ರಭಾವಕ್ಕೆ ಒಳಗಾದ ವೆಂಕಟರಮಣಪ್ಪ ಸುಮಾರು ಎರಡು ಸಾವಿರ ರೂ. ಗಳಷ್ಟು ಸಾಲಮಾಡಿ ನಾರಾಯಣರಾವ್ ಸಂಬಂಧಿಯೊಬ್ಬರಿಗೆ ಜಮೀನು ಕ್ರಯ ಮಾಡಿಕೊಡುವುದಾಗಿ ಒಪ್ಪಂದಕ್ಕೆ ತನ್ನ ಒಪ್ಪಿಗೆ ಸೂಚಿಸಿದ್ದಾನೆ ಎನ್ನಲಾಗಿದೆ. ಆದರೂ ಸಂಜೀವಮ್ಮಳ ಹೆಸರಿಗೂ ಕ್ರಯದ ಹಕ್ಕು ಪತ್ರಗಳನ್ನು ಇತ್ತೀಚೆಗೆ ನೀಡಿರುವ ದಾಖಲೆಗಳಿವೆ.

ಜಮೀನು ಮಾರುವ ಹವಣಿಕೆಯಲ್ಲಿದ್ದ ಪತಿಯ ಪ್ರಯತ್ನಕ್ಕೆ ಒಡ್ಡಿದ ತಡೆಯಿಂದ ಸಂಸಾರದಲ್ಲಿ ಹುಟ್ಟಿದ ಕಲಹ ತಮ್ಮಿಬ್ಬರ ಬೇರ್ಪಡೆಗೆ ಕಾರಣವಾಯಿತೆಂದು ಸಂಜೀವಮ್ಮ ತನ್ನ ಒಡೆದ ಸಂಸಾರಕ್ಕಾಗಿ ಕಣ್ಣೀರು ಹಾಕುತ್ತಾಳೆ.

ಪತಿ ದೂರವಾದ ಮೇಲೆ ವ್ಯವಸಾಯ ನನ್ನ ಮೇಲೆ ಬಿತ್ತು. ನವಣೆ ಬೆಳೆ ಹಾಕಿಸಲು ಜಮೀನಿಗೆ ಕಾಲಿಟ್ಟೆ. ನಾರಾಯಣರಾವ್ ಮತ್ತವನ ಕಡೆಯುವರು ಅಡ್ಡಿಪಡಿಸಿ "ಇದು ನಮಗೆ ಸೇರಿದ್ದು" ಎಂದು ಗದರಿಸಿ–ಬೆದರಿಸಿದರು. ಇವರ ಬೆದರಿಕೆಗೆ ಬಗ್ಗದೆ ನವಣೆ ಬೆಳೆ ಹಾಕಿಸಿದೆ,

'ನಾನು ಜಮೀನಿಗೆ ಕಾಲಿಡದಂತೆ ಕಾಯುತ್ತಿದ್ದರು. ಅಂದು 24, ಅಕ್ಟೋಬರ್ 1979. ಬೆಳಗ್ಗೆ ಸುಮಾರು 10 ಗಂಟೆಗೆ ಹೊಲಕ್ಕೆ ಹೋಗಿದ್ದೆ ಎಂದು ತನ್ನ ದುರ್ದಿನವನ್ನು ನೆನಪು ಮಾಡಿಕೊಳ್ಳುತ್ತಿದಂತೆ ಉಮ್ಮಳಿಸಿ ಬಂದ ದುಃಖ ನುಂಗಿಕೊಂಡು "ಎಂಟು ಮಂದಿ ಓಡಿಬಂದು ನನ್ನ ಸೆರಗು, ಮುಂದಲೆ ಹಿಡಿದು ಎಳೆದಾಡಿದರು. ಎಷ್ಟೇ ಅತ್ತು ಕರೆದರೂ ಬಿಡಲಿಲ್ಲ. ಊರಿಗೆ ಎಳೆತಂದು ಸುಮಾರು 11 ಗಂಟೆಯಲ್ಲಿ ಬೀದಿಯ ಲೈಟು ಕಂಬಕ್ಕೆ ಹಗ್ಗದಿಂದ ಬಿಗಿದು ಕಟ್ಟಿದರು. ಹೆಂಗಸರು ಮಕ್ಕಳೂ ದಿಯಾಗಿ ಊರಿನ ಜನತೆಯಲ್ಲ ಸುಮ್ಮನೆ ನೋಡುತ್ತಿದ್ದರಾದರೂ ಕೆಲವರು ನನ್ನನ್ನು ಬಿಡುವಂತೆ ಬೇಡಿಕೊಂಡರು, ಆದರೆ ಅವರ ಬೇಡಿಕೆಗೆ ಪುರಸ್ಕಾರ ಸಿಗಲಿಲ್ಲ.

'ಕಂಬಕ್ಕೆ ಕಟ್ಟಿದ ನಂತರ ಒಬ್ಬ ಕಸದ ಪೊರಕೆ ತಂದು ಮುಖದ ಮೇಲೆ ಹೊಡೆದು ಉಗುಳಲಾರಂಭಿಸಿದ. (ಚಿತ್ರದಲ್ಲಿ ಪೊರಕೆ ಇದೆ). ಒಬ್ಬರಂತೆ ಒಬ್ಬರು ಹೆಂಗಸರನ್ನುಳಿದು ಸುಮಾರು 20 ಮಂದಿ ಗಂಡಸರು ಹೊಡೆದರು, ಕಲ್ಲು ತೂರಿದರು. ಕೆಲವರು ಒದ್ದರು. ಮತ್ತೆ ಕೆಲವರು ತಲೆ ಮೇಲೂ ಉಗುಳಿದರು".

'ಹೀಗೆ ಸುಮಾರು ಒಂದು ಗಂಟೆ ಕಾಲ ನನ್ನ ಮೇಲೆ ಹಲ್ಲೆ ನಡೆಯಿತು. ನನ್ನ ಸಂಬಂಧಿಕ ಹುಡುಗಿ ಎತ್ತಿಕೊಂಡಿದ್ದ ನನ್ನ ಮಗು ನನ್ನ ಮೇಲಿನ ಹಲ್ಲೆ ನೋಡಿ ಅಳುತ್ತಿದ್ದ ದೃಶ್ಯ ಕರುಳು ಚಿವುಕುವಂತಿತ್ತು. ಅಷ್ಟರಲ್ಲಿ ನನ್ನ ಬಂಧುವೊಬ್ಬರು ಪೊಲೀಸ್‌ಗೆ ದೂರು ನೀಡಲು ಬಾಗೇಪಲ್ಲಿಗೆ ಓಡಿದರು ಎಂದು ಸಂಜೀವಮ್ಮ ಘಟನೆಯ ಚಿತ್ರವನ್ನು ಕಣ್ಮುಂದಿಟ್ಟಳು.

ಪೋಲೀಸ್‌ಗೆ ಸುದ್ದಿ ಮುಟ್ಟಿಸಲು ಬಾಗೇಪಲ್ಲಿಗೆ ಹೋದ ಸಂಜೀವಮ್ಮಳ ಬಂಧು ಮೊದಲು ಆಕೆಯ ಹಿತೈಷಿಯೊಬ್ಬರಿಗೆ ತಿಳಿಸಿದರು. ಅವರು ಬುದ್ಧಿ ಓಡಿಸಿ ಟ್ಯಾಕ್ಸಿ ಮಾಡಿ ಫೋಟೋಗ್ರಾಫರ್ ಒಬ್ಬರನ್ನು ಚರುಲೋಪಲ್ಲಿಗೆ ಕಳುಹಿಸಿ ಸಂಜೀವಮ್ಮಳನ್ನು ಹಿಂಸಿಸುತ್ತಿದ್ದ ಘಟನೆಯ ಚಿತ್ರವನ್ನು ವನ್ನು ಸೆರೆಹಿಡಿಸಿದರು. ಅದೃಷ್ಟವಶಾತ್ ಫೊಟೋ ತೆಗೆಯಲು ಹೋದಾಗ ಗುಂಪುಗೂಡಿದ್ದ ಬಹುತೇಕ ಜನ ತಮ್ಮ ತಮ್ಮ ಮನೆ–ಹೊಲಗಳಿಗೆ ಕಾಲ್ಕಿತ್ತಿದ್ದರು ಎಂದು ಫೋಟೋ ದೊರೆತ ಮೂಲಗಳ ಹೇಳಿಕೆ.

ಪೋಲೀಸರಿಗೆ ಈ ಅಮಾನುಷ ಕೃತ್ಯದ ದೂರು ಮುಟ್ಟಿದ ನಂತರ ಬಾಗೇಪಲ್ಲಿಯಿಂದ ಪೋಲೀಸ್ ಸಿಬ್ಬಂದಿಯು ಸುಮಾರು ಸಂಜೆ 4 ಗಂಟೆಗೆ ಚರುಲೋಪಲ್ಲಿಗೆ ಧಾವಿಸಿತೆಂದು ಹೇಳಲಾಗಿದೆ, ಪೊಲೀಸರು ಊರಿಗೆ ಧಾವಿಸಿದ ಕೂಡಲೆ ತಮ್ಮನ್ನು ಕಂಡ ಸಂಜೀವಮ್ಮ "ನನ್ನನ್ನು ಬಿಡಿಸಿ ಸ್ವಾಮಿ, ನನಗೆ ರಕ್ಷಣೆ ಕೊಡಿ ಸ್ವಾಮಿ ಎಂದು ಗಳಗಳನೆ ಅಳಲು ಪ್ರಾರಂಬಿಸಿದಳು. ಅಷ್ಟರಲ್ಲಿ ಪಂಚಾಯಿತಿದಾರರಲ್ಲೊಬ್ಬರಾದ ಕೊಡಂವಾರಿಪಲ್ಲಿಯ ಚಿಲ್ಲಾರತ್ನಯ್ಯರವರಿಂದ ಹಗ್ಗವನ್ನು ಬಿಚ್ಚಿಸಲಾಯಿತು" ಎಂದು ಪೋಲೀಸರು ಇನ್ನಿತರ ವಿವರಗಳನ್ನು ಅಂದೇ ತಮ್ಮ (ಎಫ್.ಐ.ಆರ್.) ಪ್ರಥಮ ವರದಿಯಲ್ಲಿ ಕಾಣಿಸಿದ್ದಾರೆ.

ಈ ಘಟನೆಯ ಬಗ್ಗೆ ಡಿ.ಪಿ.ಜಿ. ಸೆಲ್‌ಗೂ ದೂರು ನೀಡಲಾಗಿದ್ದು, ದೂರು ಮುಟ್ಟಿದ ಎರಡನೇ ದಿನದಲ್ಲಿ ಬೆಂಗಳೂರಿನಿಂದ ಪೋಲೀಸ್ ಸಿಬ್ಬಂದಿಯು ಚರುಲೋಪಲ್ಲಿಗೆ ಹೋಗಿತ್ತೆಂದು ಹೇಳಲಾಗುತ್ತಿದೆ.

ಈ ಹೇಯ ಕುಕೃತ್ಯಕ್ಕೆ ಹೆದರಿ ಅವಮಾನಿತಳಾಗಿ ಎರಡು ತಿಂಗಳು ಕಾಲ ಊರು ತೊರೆದು ತವರು ಸೇರಿದ್ದ ಸಂಜೀವಮ್ಮ ಮತ್ತೆ ಭೂಮಿ ಆಸೆಗಾಗಿ ಧೈರ್ಯಮಾಡಿ ಚರುಲೋಪಲ್ಲಿಗೆ ಬಂದು ನೆಲಸಿದ್ದಾಳೆ,

ಈವರಗೆ ಯಾವ ಆಶ್ವಾಸನೆಯೂ ಸಿಗದ ಸಂಜೀವಮ್ಮ 'ನನಗೆ ನೀವಾದರೂ ರಕ್ಷಣೆ ಕೊಡಿ' ಎಂದು ಬಾಗೇಪಲ್ಲಿಯ ದಲಿತ ಸಂಘರ್ಷ ಸಮಿತಿಗೆ ಮೊರೆಹೊಕಿದ್ದಾಳೆ. ನನಗೆ ಜಮೀನು ದಕ್ಕದೆ ಹೋದರೆ ಯಾಕಾರು ಬದುಕಬೇಕು? ಎಂಬ ಬದುಕಿನ ಪ್ರಶ್ನೆ ಜತೆಗೆ ಜಮೀನು ನನಗೇ ಸಿಗುವುದೆಂಬ ಆಶಯವನ್ನು ಹೊಂದಿದ್ದಾಳೆ.

ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ಕಾಣಿಸಿಕೊಳ್ಳುತ್ತಿರುವ ಭೂ ಮಾಲೀಕರ ಮತ್ತು ಭೂಹೀನರ ನಡುವಿನ ವರ್ಗಸಂಘರ್ಷದ ಹಿನ್ನೆಲೆಯಲ್ಲಿ ಇದೊಂದು ಗಂಭೀರವಾದ ಘಟನೆಯೇ ಹೌದೆಂದು ಭಾವಿಸಬಹುದು. ಆದರೆ ದಲಿತರ ಮತ್ತು ಭೂಹೀನರ ಪ್ರತಿಭಟನೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಭಾರಿ ಜಮೀನುಳ್ಳ ಮಾಜಿ ಶಾಸಕರೊಬ್ಬರ ನೇತೃತ್ವದಲ್ಲಿ ಬಿಹಾರದ ಭೂಸ್ವಾಮಿಗಳ ಸಂಘಟನೆಯ ಮಾದರಿಯಲ್ಲೇ ಜಿಲ್ಲೆಯಾದ್ಯಂತ ಈಚೆಗೆ ಪ್ರಬಲವಾಗಿ ಭೂ ಒಡೆಯರ ಸಂಘಟನೆ ಆಗುತ್ತಿರುವುದರಿಂದ ದಲಿತರ, ಭೂಹೀನರ ಮತ್ತು ದಲಿತ ಮಹಿಳೆಯರ ಮೇಲೆ ನಡೆಯಬಹುದಾದ ಅಮಾನುಷ ಹಲ್ಲೆ–ಕೊಲೆ–ಸುಲಿಗೆಗಳು ಇನ್ನು ಮುಂದೆ ಯಾವ ಅಚ್ಚರಿಯನ್ನು ಉಂಟುಮಾಡದೇ ಹೋಗಬಹುದು.

ಸಾರ್ವಜನಿಕರಲ್ಲಿ ಒಂದು ಮನವಿ

ಪೂಜ್ಯರೇ,

ರಾಜ್ಯದ ಉದ್ದಗಲಕ್ಕೂ ಬೆಳೆದಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಸಿವು-ಅಸ್ಪೃಶ್ಯತೆ ಇಲ್ಲದ ಶೋಷಣಾಮುಕ್ತ ಸಮಾಜ ನಿರ್ಮಾಣಕ್ಕಾಗಿ ಕೆಲಸ ಮಾಡುತ್ತಿರುವ ಒಂದು ಸಂಘಟನೆ. ಶೋಷಿತರ ನೋವಿಗೆ ನುಡಿಕೊಡುತ್ತಿರುವ ಸಂಘರ್ಷ ಸಮಿತಿ ಈಗಾಗಲೆ ಎಲ್ಲ ಜಾತಿಯ ಬಡವರಿಗೂ ಸಹಾಯಕವಾಗುವ ಸುಮಾರು 1600 ಎಕರೆ ಕ್ಯಾಸನಕೆರೆ ಭೂ ಹೋರಾಟ, ದಲಿತರಿಗೆ ಸುಮಾರು 50 ಲಕ್ಷಕ್ಕೂ ಹೆಚ್ಚು ಜಮೀನು ದಕ್ಕಿದ ಚಂಡಗೋಡು ಹೋರಾಟ ಮತ್ತು 33 ಎಕರೆ ಜಮೀನು ದಲಿತರ ಪಾಲಾಗಲು ಸಿದ್ಲಿಪುರ ಮುಂತಾದ ಐತಿಹಾಸಿಕ ಹೋರಾಟಗಳಲ್ಲಿ ಜಯಗಳಿಸಿದೆ. ಆದರೂ ಈಗ ತಗಡೂರು ಮತ್ತು ಕರಡಗೂರು ದಲಿತರ ನಿವೇಶನ ಸಮಸ್ಯೆಗಳು ಇನ್ನೂ ಬಗೆಹರಿಯಲಾರದೆ ಸಂಘಟನೆಗೆ ಒಂದು ಸವಾಲಾಗೇ ಇವೆ.

ಸಂಘರ್ಷ ಸಮಿತಿಯ ಈ ಹೋರಾಟ ಮತ್ತು ತತ್ವಗಳಿಗೆ ಬದ್ಧರಾದ ಅನೇಕ ಯುವಕರು ಅಲ್ಲಲ್ಲಿ ಸಂಘಟನೆಗೆ ಪೂರ್ಣಾವಧಿಕಾರ್ಯಕರ್ತರಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. ಜತೆಗೆ ಜನತೆಯನ್ನು ಹೋರಾಟದ ಪಥಕ್ಕೆಳೆಸಲು ಕ್ರಾಂತಿಕಾರಿ ಮತ್ತು ದಲಿತ ಸಾಹಿತ್ಯ ಪರಿಚಯದ ಹೊಣೆಯು ಸಂಘಟನೆಯ ಮೇಲಿದೆ. ಈ ದಿಕ್ಕಿನಲ್ಲಿ 'ಪಂಚಮ'ವನ್ನು ಬಹಳ ಕಷ್ಟದಿಂದಲೇ ತರಲಾಗುತ್ತಿದೆ. ಮತ್ತೆ ಸಂಘಟನೆಯ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಇನ್ನೂ ಬೇರೇನೂ ಬಿಚ್ಚಿ ಹೇಳುವ ಅಗತ್ಯವಿಲ್ಲವೆನಿಸುತ್ತದೆ.

ಹೋರಾಟಕ್ಕೆ ಸಂಬಂಧಿಸಿದ ಈ ಎಲ್ಲ ಅನಿವಾರ್ಯತೆಯನ್ನು ಗುರುತಿಸಿಕೊಂಡು ಸಂಘಟನೆಗೆ ನಿಮ್ಮ ಕೈಲಾದ ಹಣದ ನೆರವನ್ನು ನೀಡುವ ಮೂಲಕ ಸಂಘಟನೆಯ ಹೋರಾಟದಲ್ಲಿ ನೀವು ಪಾಲ್ಗೊಳ್ಳಬೇಕೆಂಬುದು ನಮ್ಮ ಆಸೆ.

ಬಿ. ಕೃಷ್ಣಪ್ಪ
ಭದ್ರಾವತಿ ಸಂಚಾಲಕ ಕ.ದ.ಸಂ.ಸ.

ಣ ಕಳುಹಿಸುವ ವಿಳಾಸ :

ಒ. ರಾಜಣ್ಣ
ಖಜಾಂಚಿ, ಕ.ದ.ಸಂ.ಸ
114, ಮಹಡಿ, 3ನೇ ಬ್ಲಾಕ್ ಪೂರ್ವ
ಜಯನಗರ, ಬೆಂಗಳೂರು-560011.

ತಿಪಟೂರು ತಾಲ್ಲೂಕಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

[ಪಂಚಮ ಪ್ರತಿನಿಧಿಯಿಂದ]

ತಿಪಟೂರು ತಾಲ್ಲೂಕು ಬಿದ್ರೆಗುಂಡಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಕೆಂಪಮ್ಮನ ಜಾತ್ರೆಯಲ್ಲಿ ದಲಿತ ಸಂಘರ್ಷ ಸಮಿತಿ ತಿಪಟೂರು ತಾಲ್ಲೂಕು ಶಾಖೆ ಕಾರ್ಯಕರ್ತರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದರು.

ಸಾಂಸ್ಕೃತಿಕ-ಜಾಥಾ ಕಾರ್ಯಕ್ರಮದಲ್ಲಿ ಬೆಲ್ಚಿ, ಪಿಪ್ರಾಗಳಲ್ಲಿ ನಡೆದ ದಲಿತರ ಕಗ್ಗೊಲೆಗಳನ್ನು ನಾಟಕಗಳ ಮೂಲಕ ಪ್ರದರ್ಶಿಸಲಾಯಿತು. ದಲಿತರ ದುಃಖದುಮ್ಮಾನಗಳನ್ನು ಹೇಳುವ ಕ್ರಾಂತಿಕಾರಿ ಹಾಡುಗಳು ಜನಜಂಗುಳಿಯ ಕಣ್ಣಲ್ಲಿ ನೀರುತಂದವು. ಈ ಜಾತ್ರೆಯಲ್ಲಿ ಸುಮಾರು 30 ಅಕ್ಕಪಕ್ಕದ ಗ್ರಾಮಗಳ ಜನರು ಸೇರಿದ್ದರು.

ನಾಲ್ವರು ದಲಿತರ ಕೊಲೆ

(3ನೇ ಪುಟದಿಂದ)

ನಿಸಿದ ಲಕ್ಷ್ಮೀನಾಯಕ ಭೂಮಾಲೀಕನೊಬ್ಬನ ಬೆಂಬಲಪಡೆದು ಮಾರ್ಚ್ 18 ರಂದು ನಿರ್ಜನವಾದ ಬೆಟ್ಟಗುಡ್ಡದ ಬಟ್ಟಬಯಲಿನಲ್ಲಿ ಹಾಡುಹಗಲೇ ನಂಜುಂಡನ ಕೈಕಾಲುಗಳನ್ನು ಮಚ್ಚಿನಿಂದ ಕಡಿದು ಕೊಂದುಹಾಕಿದ.

ಅದೇ ರಾತ್ರಿ ತನ್ನ ಇನ್ನಿತರ ಬೆಂಬಲಿಗರ ಸಹಾಯದಿಂದ ಸಮೀಪದ ಬೆಟ್ಟದ ತಪ್ಪಲಿನಲ್ಲಿ ಹೆಣಕ್ಕೆ ಬೆಂಕಿ ಹಚ್ಚಿದ ಭೀಕರ ಕಗ್ಗೊಲೆ ಈಗ ಬೆಳಕುಕಂಡಿದೆ. ಈ ಸಂಬಂಧದಲ್ಲಿ ಪೋಲೀಸರು ಯಾರನ್ನು ಬಂಧಿಸದೇ ಮೌನವಾಗಿರುವುದು ಖಂಡನೀಯ.

ಇತ್ತೀಚೆಗೆ ದಲಿತರ ಕಸಾಯಿಖಾನೆ ಆಗುತ್ತಿರುವ ಕೋಲಾರ ಜಿಲ್ಲೆಯಲ್ಲಿ ದಲಿತರು ತುರ್ತಾಗಿ ಸಂಘಟಿತರಾಗದಿದ್ದಲ್ಲಿ ಯಾರ್ಯಾರ ಸರದಿ ಎಂದೋ ಏನೋ ಎಂದು ಹೇಳಲು ಬಾರದ ಸ್ಥಿತಿ ಎದುರಾಗಿದೆ.

ಈ ಪತ್ರಿಕೆಯು ರಾಮದೇವ ರಾಕೆಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ.ಬೆಂಗಳೂರ 560002.